(೯) RPAD (21)

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 86 ಪಿಎಫ್‌ಜಿ 2013

ಕರ್ನಾಟಕ ಸರ್ಕಾರದ ಸಚಿವಾಲಯ,
6ನೇ ಮಹಡಿ, 1ನೇ ಹಂತ,
ಬಹುಮಹಡಿ ಕಟ್ಟಡ, ಬೆಂಗಳೂರು-1,
ದಿನಾಂಕ: 20.08.2013.

## ಸುತ್ತೋಲೆ

ವಿಷಯ: 1980ರ ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ್ ಸಮ್ಮಾನ್ ಪಿಂಚಣಿ ಯೋಜನೆಯಡಿ ಕೇಂದ್ರ ಪಿಂಚಣಿಯನ್ನು ಪಡೆಯುತ್ತಿರುವ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ್ದ ಸಂಧರ್ಭದಲ್ಲಿ ಅವರ ವಿಧವಾ ಪತ್ನಿಯು ಅಥವಾ ಅವರ ಅವಿವಾಹಿತ, ನಿರುದ್ಯೋಗಿ ಹಾಗೂ ಅವಲಂಬಿತರಾದ ಹೆಣ್ಣುಮಗಳಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವ ಸಲುವಾಗಿ ಸ್ವೀಕರಿಸಲಾಗುವ ಅರ್ಜಿಗಳನ್ನು ನಿರ್ವಹಿಸುವ ಸಂಬಂಧ ಪಾಲಿಸಬೇಕಾದ ಸೂಚನೆಗಳು.

****

1980ರ ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ್ ಸಮ್ಮಾನ್ ಪಿಂಚಣಿ ಯೋಜನೆಯಡಿ ಕೇಂದ್ರ ಪಿಂಚಣಿಯನ್ನು ಪಡೆಯುತ್ತಿರುವ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ್ದ ಸಂದರ್ಭದಲ್ಲಿ ಅವರ ವಿಧವಾ ಪತ್ನಿಯು ಅಥವಾ ಅವರ ಅವಿವಾಹಿತ, ನಿರುದ್ಯೋಗಿ ಹಾಗೂ ಅವಲಂಬಿತರಾದ ಹೆಣ್ಣುಮಗಳಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವ ಸಲುವಾಗಿ ಕೇಂದ್ರ ಸರ್ಕಾರವು ಅವಕಾಶ ಕಲ್ಪಿಸಲಾಗಿದೆ. ಆದರೆ, ಇತ್ತೀಚೆಗೆ ಬಹುತೇಕ ಜಿಲ್ಲಾಧಿಕಾರಿಗಳು ಈ ಸಂಬಂಧ ಸ್ವೀಕರಿಸಲಾಗುವ ಅರ್ಜಿಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸದೇ, ಇಂತಹ ಅರ್ಜಿಗಳನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಿಕೊಡುತ್ತಿದ್ದಾರೆ. ಆದುದರಿಂದ, ಇಂತಹ ಪ್ರಕರಣಗಳನ್ನು ಪರಿಶೀಲಿಸುವ ಸಲುವಾಗಿ ಕೆಳಕಂಡಂತೆ ನೀಡಲಾಗಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಖಜಾನಾಧಿಕಾರಿಗಳಿಗೆ ಈ ಮೂಲಕ ಕೋರಲಾಗಿದೆ.

1) 1980ರ ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ್ ಸಮ್ಮಾನ್ ಪಿಂಚಣಿ ಯೋಜನೆಯಡಿ ಕೇಂದ್ರ ಪಿಂಚಣಿಯನ್ನು ಪಡೆಯುತ್ತಿರುವ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ್ದ ಸಂದರ್ಭದಲ್ಲಿ ಅವರ ವಿಧವಾ ಪತ್ನಿಯು ಅಥವಾ ಅವರ ಅವಿವಾಹಿತ, ನಿರುದ್ಯೋಗಿ ಹಾಗೂ ಅವಲಂಬಿತರಾದ ಹೆಣ್ಣುಮಗಳಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವ ಸಲುವಾಗಿ ಇದರೊಂದಿಗೆ ಲಗತ್ತಿಸಿರುವ ನಿಗಧಿತ ನಮೂನೆಯ ಅರ್ಜಿಯನ್ನು ಭರ್ತಿಮಾಡಿ ಅರ್ಜಿದಾರರು ಕೆಳಕಂಡ ದಾಖಲಾತಿಗಳೊಂದಿಗೆ ಅರ್ಜಿಯನ್ನು ನೇರವಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು

2) ಈ ವಿಷಯದಲ್ಲಿ ಕೆಳಕಂಡ ಅಂಶಗಳ ಬಗ್ಗೆ ಪರಿಶೀಲಿಸಿ, ಅರ್ಜಿದಾರರು 1980ರ ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ ಸಮ್ಮಾನ್ ಪಿಂಚಣಿ ಯೋಜನೆಯಡಿ ಕೇಂದ್ರ ಸರ್ಕಾರದ ಕುಟುಂಬ ಪಿಂಚಣಿಯನ್ನು ಪಡೆಯಲು ನಿಯಮಾನುಸಾರ ಅರ್ಹರಾಗಿದ್ದಲ್ಲಿ, ಈ ಬಗ್ಗೆ ಪ್ರಸ್ತಾವನೆಯನ್ನು ಆಯಾ ಜಿಲ್ಲಾಧಿಕಾರಿಯವರು ಕೆಳಕಂಡ ದಾಖಲೆಗಳ ಬಗ್ಗೆ ಪರಿಶೀಲಿಸಿ ಸದರಿ ಅರ್ಜಿಗಳನ್ನು ಅವರ ಕಛೇರಿಯ ವತಿಯಿಂದ ನೇರವಾಗಿ ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಯವರಿಗೆ ಕಳುಹಿಸಬೇಕು

3) ಅರ್ಜಿದಾರರು ಸ್ವಾತಂತ್ರ್ಯ ಯೋಧರ ವಿಧವಾ ಪತ್ನಿಯಾಗಿದ್ದಲ್ಲಿ ಅವರು ತಹಶೀಲ್ದಾರ್ ರವರ ಕಛೇರಿಯಿಂದ ಪಡೆದಿರುವ ತಮ್ಮ ದಿವಂಗತ ಪತಿಯವರ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಇದರ ಜೊತೆಗೆ ಅರ್ಜಿದಾರರು, ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರ ವಿಧವಾ ಪತ್ನಿಯಾಗಿರುವ ಬಗ್ಗೆ ಹಾಗೂ ಅವರು ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಲು ವಿಳಂಬವಾಗಿದ್ದಲ್ಲಿ, ಈ ಬಗ್ಗೆ ಸೂಕ್ತ ಕಾರಣಗಳೊಂದಿಗೆ ನೋಟರಿರವರ ಮುಂದೆ ಪ್ರಮಾಣೀಕರಿಸಿರುವ ಅಫಿಡವಿಟರ ಮೂಲ ಪ್ರತಿಯನ್ನು ಸಲ್ಲಿಸಬೇಕು.

4) ಹಾಗೊಮ್ಮೆ, ಅರ್ಜಿದಾರರು ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರ ಮಗಳಾಗಿದ್ದಲ್ಲಿ ಅವರು ಈ ಬಗ್ಗೆ ತಹಶೀಲ್ದಾರ್ ರವರಿಂದ ಮೂಲ ವಾರಸುದಾರರ ಪ್ರಮಾಣ ಪತ್ರ ಪಡೆಯಬೇಕು. ಇದರ ಜೊತೆಗೆ ಕೇಂದ್ರ ಪಿಂಚಣಿಯನ್ನು ಪಡೆಯುತ್ತಿದ್ದ ಅವರ ತಂದೆ/ತಾಯಿಯವರ ಮರಣ ಪ್ರಮಾಣ ಪತ್ರವನ್ನು ತಹಶೀಲ್ದಾರ್ ರವರ ಕಛೇರಿಯಿಂದ ಪಡೆದು ಸಲ್ಲಿಸಬೇಕು.

5) ಇದರ ಜೊತೆಗೆ ಕೇಂದ್ರ ಪಿಂಚಣಿ/ ಕೇಂದ್ರ ಕುಟುಂಬ ಪಿಂಚಣಿಯನ್ನು ಪಡೆಯುತ್ತಿದ್ದ ಹಾಗೂ ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರು/ಅಥವಾ ಸ್ವಾತಂತ್ರ್ಯ ಯೋಧರ ವಿಧವಾ ಪತ್ನಿಯವರು ಯಾವ ದಿನಾಂಕದವರೆಗೂ ಕೇಂದ್ರ ಪಿಂಚಣಿಯನ್ನು ಪಡೆದಿರುತ್ತಾರೆ, ಎಂಬುದರ ಬಗ್ಗೆ (ಅಂದರೆ. ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರ ವಿಧವಾ ಪತ್ನಿ ಅಥವಾ ಸ್ವಾತಂತ್ರ್ಯ ಯೋಧರ ಅವಿವಾಹಿತ ಹೆಣ್ಣುಮಗಳು) ಅವರ ಪಿಪಿಓ ಪುಸ್ತಕದ ಜೆರಾಕ್ಸ್ ಪ್ರತಿ ಹಾಗೂ ಅವರು ಯಾವ ದಿನಾಂಕದವರೆಗೆ ಕೇಂದ್ರ ಪಿಂಚಣಿ/ಕೇಂದ್ರ ಕುಟುಂಬ ಪಿಂಚಣಿಯನ್ನು ಪಡೆದಿದ್ದಾರೆ, ಎಂಬುದರ ಬಗ್ಗೆ, ಜಿಲ್ಲಾ ಖಜಾನೆಯಿಂದ ಪಡೆದಿರುವ ಮೂಲ ಪ್ರಮಾಣದ ಪ್ರತಿಯನ್ನು ಅರ್ಜಿದಾರರು ಸಲ್ಲಿಸಬೇಕಾಗುತ್ತದೆ.

6) ಹಾಗೊಮ್ಮೆ, ಸ್ವಾತಂತ್ರ್ಯ ಯೋಧರ ಹೆಣ್ಣುಮಗಳು ಅರ್ಜಿದಾರರಾಗಿದ್ದಲ್ಲಿ ಅವರು ಅವಿವಾಹಿತರು/ನಿರುದ್ಯೋಗಿ/ಹಾಗೂ ಅವಲಂಬಿತರಾಗಿರುವ ಬಗ್ಗೆ ಅರ್ಜಿದಾರರು ನೋಟರಿ ರವರ ಮುಂದೆ ಪ್ರಮಾಣೀಕರಿಸಿರುವ ಅಫಿಡವಿಟ್‌ರ ಮೂಲ ಪ್ರತಿಯನ್ನು ಪಡೆಯಬೇಕು. ಇದರ ಜೊತೆಗೆ ಕೇಂದ್ರ ಕುಟುಂಬ ಪಿಂಚಣಿಗಾಗಿ ಅರ್ಜಿಯನ್ನು ಸಲ್ಲಿಸುವ ಬಗ್ಗೆ ವಿಳಂಬವಾಗಿದ್ದಲ್ಲಿ, ಸದರಿ ವಿಳಂಬಕ್ಕೆ ಸೂಕ್ತ ಕಾರಣಗಳನ್ನು ಸಹ ಅರ್ಜಿದಾರರು ತಮ್ಮ ಅಫಿಡವಿಟ್‌ರಲ್ಲಿ ಪ್ರತ್ಯೇಕವಾಗಿ ನಮೂದಿಸಬೇಕು.

7) ಸ್ವಾತಂತ್ರ್ಯ ಯೋಧರ ಹೆಣ್ಣುಮಗಳು ಅರ್ಜಿದಾರರಾಗಿದ್ದಲ್ಲಿ ಅವರು ಅವಿವಾಹಿತರಾಗಿರುವ ಬಗ್ಗೆ/ನಿರುದ್ಯೋಗಿಯಾಗಿರುವ ಬಗ್ಗೆ ಹಾಗೂ ಅವರು ಅವಲಂಬಿತರಾಗಿರುವ ಬಗ್ಗೆ ಸ್ಥಳೀಯ ತನಿಖೆ ನಡೆಸಿ ಈ ಬಗ್ಗೆ ತಹಸೀಲ್ದಾರ್ ರವರಿಂದ ಮೂಲ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಯವರು ಪಡೆಯಬೇಕು.

8) ಹಾಗೊಮ್ಮೆ, ಅರ್ಜಿದಾರರಾದ ಸ್ವಾತಂತ್ರ್ಯ ಯೋಧರ ಹೆಣ್ಣುಮಗಳು ಅವಿವಾಹಿತರು/ ನಿರುದ್ಯೋಗಿ ಹಾಗೂ ಅವಲಂಬಿತರಾಗಿರುವುದಾಗಿ ಕಂಡುಬಂದಲ್ಲಿ, ಈ ಬಗ್ಗೆ ಅರ್ಜಿದಾರರ ತಂದೆಯವರಿಗೆ ಕೇಂದ್ರ ಸರ್ಕಾರದ ಕುಟುಂಬ ಪಿಂಚಣಿಯನ್ನು ಮಂಜೂರಾಗಿರುವ/ಅಥವಾ ಸ್ವಾತಂತ್ರ್ಯ ಯೋಧರ ವಿಧವಾ ಪತ್ನಿಯವರಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರಾದ ಆದೇಶ ದೃಢೀಕೃತ ಜೆರಾಕ್ಸ್ ಪ್ರತಿ/ಅವರು ಯಾವ ದಿನಾಂಕದವರರೆಗೂ/ಕೇಂದ್ರ ಪಿಂಚಣಿ/ಕೇಂದ್ರ ಕುಟುಂಬ ಪಿಂಚಣಿಯನ್ನು ಪಡೆದಿದ್ದಾರೆ? ಎಂಬುದರ ಬಗ್ಗೆ ಸಂಬಂಧಪಟ್ಟ ಖಜಾನೆ ಅಥವಾ ಬ್ಯಾಂಕಿನಿಂದ ಪಡೆದಿರುವ ಮೂಲ ಪ್ರಮಾಣ ಪತ್ರವನ್ನು ಅರ್ಜಿದಾರರು ಸಲ್ಲಿಸಬೇಕು

9) ಕೇಂದ್ರ ಸರ್ಕಾರದ ಕುಟುಂಬ ಗೌರವಧನ ಮಂಜೂರಾತಿಗಾಗಿ ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಅರ್ಜಿಯ ನಮೂನೆಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಈ ಅರ್ಜಿಯನ್ನು ಅರ್ಜಿದಾರರಿಂದ ಭರ್ತಿ ಮಾಡಿಸಿ, ಅದನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ, ಅರ್ಜಿದಾರರ ಪಾಸ್‌ಪೋರ್ಟ್ ಅಳತೆಯ 03 ಭಾವಚಿತ್ರಗಳು/ಅವರ 03 ಮಾದರಿ ಸಹಿ/03 ಹೆಬ್ಬೆಟ್ಟಿನ ಗುರುತು ಹಾಗೂ ಸರ್ಕಾರದ ವೈದ್ಯಾಧಿಕಾರಿಯವರಿಂದ ದೃಢೀಕರಿಸಿದ ಅವರ ಗುರುತಿನ ಚಿಹ್ನೆ ಬಗ್ಗೆ ತ್ರಿಪ್ರತಿಗಳಲ್ಲಿ ಮೂಲ ದಾಖಲೆಗಳನ್ನು ಅರ್ಜಿದಾರರಿಂದ ಜಿಲ್ಲಾಧಿಕಾರಿಗಳು ಪಡೆಯಬೇಕು.

10) ಇದರ ಜೊತೆಗೆ ಕಂಡಿಕೆ 1 ರಿಂದ 9 ರಲ್ಲಿ ನಮೂದಿಸಿರುವ ದಾಖಲೆಗಳನ್ನು ಅರ್ಜಿದಾರರಿಂದ ಪಡೆಯಲಾದ ನಂತರ, ಸದರಿ ದಾಖಲೆಗಳನ್ನು ಪರಿಶೀಲಿಸಿ ನಿಗಧಿತ ನಮೂನೆಯ ಅರ್ಜಿಯಲ್ಲಿ ಜಿಲ್ಲಾಧಿಕಾರಿಗಳು ತಮ್ಮ ಕಛೇರಿಯ ಸಹಿ/ಮೊಹರು ಹಾಕಿ ಈ ಎಲ್ಲಾ ದಾಖಲೆಗಳನ್ನು ದೃಢೀಕರಿಸಿ, 1980ರ ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ ಸಮ್ಮಾನ್ ಪಿಂಚಣಿ ಯೋಜನೆಯಡಿ ಅರ್ಜಿದಾರರು ಕೇಂದ್ರ ಕುಟುಂಬ ಪಿಂಚಣಿಯನ್ನು ಪಡೆಯಲು ನಿಯಮಾನುಸಾರ ಅರ್ಹರಾಗಿದ್ದಾರೆಯೇ? ಎಂಬುದರ ಬಗ್ಗೆ ಜಿಲ್ಲಾಧಿಕಾರಿಗಳು ತಮ್ಮ ಸೂಕ್ತ ಶಿಫಾರಸ್ಸಿನೊಂದಿಗೆ ವರದಿಯನ್ನು ಜಿಲ್ಲಾ ಖಜಾನಾಧಿಕಾರಿಯವರಿಗೆ ಕಳುಹಿಸಬೇಕು.

11) ಅನಂತರ ಕಂಡಿಕೆ 1 ರಿಂದ 10 ರಲ್ಲಿ ನಮೂದಿಸಿರುವ ದಾಖಲೆಗಳು ಜಿಲ್ಲಾ ಖಜಾನಾಧಿಕಾರಿಯವರ ಕಛೇರಿಯಲ್ಲಿ ಸ್ವೀಕೃತಿಯಾದ ನಂತರ, ಸದರಿ ದಾಖಲೆಗಳನ್ನು ಪರಿಶೀಲಿಸಿ, ಈ ಬಗ್ಗೆ ಪ್ರಸ್ತಾವನೆಯನ್ನು ಜಿಲ್ಲಾ ಖಜಾನಾಧಿಕಾರಿಯವರು ನೇರವಾಗಿ ಮಹಾಲೇಖಪಾಲರು, ಬೆಂಗಳೂರು ಇವರಿಗೆ ಕಳುಹಿಸಿ, ಸದರಿ ಪತ್ರದ ಪ್ರತಿಯನ್ನು ಜಿಲ್ಲಾಧಿಕಾರಿ/ಅರ್ಜಿದಾರರಿಗೆ ಜರೂರಾಗಿ ಕಳುಹಿಸಬೇಕು.

12) ಅರ್ಜಿದಾರರಿಗೆ ಯಾವ ದಿನಾಂಕದಿಂದ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡಬೇಕಾಗುತ್ತದೆ, ಎಂಬ ವಿಷಯವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವುದರಿಂದ ಈ ಬಗ್ಗೆ ಮಹಾಲೇಖಪಾಲರು ತಮ್ಮ ಅನುಮೋದನೆ ನೀಡಬೇಕಾಗುತ್ತದೆ. ಈ ಸಂಬಂಧ ಮಹಾಲೇಖಪಾಲರ ಕಛೇರಿಯಿಂದ ಹೆಚ್ಚುವರಿ ಮಾಹಿತಿ/ದಾಖಲೆಗಳನ್ನು ಕೋರಿದ್ದಲ್ಲಿ, ಈ ಸಂಬಂಧ ಜಿಲ್ಲಾಧಿಕಾರಿಗಳು/ಜಿಲ್ಲಾ ಖಜಾನಾಧಿಕಾರಿಗಳು ಈ ಬಗ್ಗೆ ಹೆಚ್ಚುವರಿ ಮಾಹಿತಿಯನ್ನು ನೇರವಾಗಿ ಮಹಾಲೇಖಪಾಲರಿಗೆ ಕಳುಹಿಸಬೇಕು. ನಂತರ, ಇಂತಹ ಪ್ರಸ್ತಾವನೆಗಳಿಗೆ ಮಹಾಲೇಖಪಾಲರ ಅನುಮೋದನೆ ಪಡೆಯಲಾದ ನಂತರ, ಅರ್ಜಿದಾರರಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡಲಾಗಿದೆಯೇ? ಎಂಬುದರ ಬಗ್ಗೆ ಮಾಹಿತಿಯನ್ನು ಅರ್ಜಿದಾರರಿಗೆ ನೀಡಿ, ಅದರ ಪ್ರತಿಯನ್ನು ಮಹಾಲೇಖಪಾಲರು/ಜಿಲ್ಲಾಧಿಕಾರಿಯವರಿಗೆ/ ಸರ್ಕಾರಕ್ಕೆ ಪ್ರತ್ಯೇಕವಾಗಿ ಜಿಲ್ಲಾ ಖಜಾನೆಯ ವತಿಯಿಂದ ಕಳುಹಿಸಬೇಕು.

13) ಹಾಗೊಮ್ಮೆ, ಅರ್ಜಿದಾರರು ಸಲ್ಲಿಸಿರುವ ದಾಖಲೆಗಳ ಪ್ರಕಾರ ಅರ್ಜಿದಾರರು ವಿವಾಹಿತರು ಎಂಬುದಾಗಿ ಕಂಡುಬಂದಲ್ಲಿ, ಅವರು ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ ಸಮ್ಮಾನ್ ಪಿಂಚಣಿ ಯೋಜನೆಯಡಿ ಅರ್ಜಿದಾರರು ಕೇಂದ್ರ ಕುಟುಂಬ ಪಿಂಚಣಿಯನ್ನು ಪಡೆಯಲು ನಿಯಮಾನುಸಾರ ಅರ್ಹರಾಗಿಲ್ಲದಿರುವ ಬಗ್ಗೆ, ಅರ್ಜಿದಾರರಿಗೆ ಪ್ರತ್ಯೇಕವಾಗಿ ಜಿಲ್ಲಾಧಿಕಾರಿಯವರ ಕಛೇರಿಯ ವತಿಯಿಂದ ಕಡ್ಡಾಯವಾಗಿ ಹಿಂಬರಹ ನೀಡಬೇಕು.

ಮೇಲಿನ ಸೂಚನೆಗಳನ್ನು ಪ್ರತಿಯೊಂದು ಜಿಲ್ಲೆಯ ಸಹಾಯಕ ಆಯುಕ್ತರು/ತಹಶೀಲ್ದಾರ್ ರವರು/ಉಪ ಮತ್ತು ತಾಲ್ಲೂಕು ಖಜಾನೆಗಳ ಗಮನಕ್ಕೆ ತರಲು ಈ ಬಗ್ಗೆ ಪ್ರತ್ಯೇಕವಾಗಿ ಸೂಚನೆಗಳನ್ನು ಹೊರಡಿಸಿ ಜಿಲ್ಲಾಧಿಕಾರಿಗಳು/ಜಿಲ್ಲಾ ಖಜಾನಾಧಿಕಾರಿಗಳಿಂದ ಮುಂದಿನ ಕ್ರಮ ಜರುಗಿಸುವಂತೆ ಕೋರಲಾಗಿದೆ.

ನಿಮ್ಮ ನಂಬುಗೆಯ,

20/8/2013

(ಅಬ್ದುಲ್ ರೆಹಮಾನ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿ.ಆ.ಸು.ಇ.(ಆಸು-ರಾಜಕೀಯ ವಿಶ್ರಾಂತಿ ವೇತನ-1)

ದೂ: 080-22032393

ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:

1) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
2) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.

ಪ್ರತಿ ಮಾಹಿತಿಗಾಗಿ: ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರ ಮಾಹಿತಿಗಾಗಿ.